# <u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ ಜೇವರ್ಗಿ</u>

## <u>ಸಿಸಿ ನಂ.661/201</u>

**ಚಾಸಾ-1/ಪಿಡಬ್ಲೂ-1**

| | |
|---|---|
| **ಹೆಸರು** | ದೇವಕ್ಕಿ |
| **ಗಂಡನ ಹೆಸರು** | ಲಕ್ಷ್ಮಣ |
| **ವಯಸ್ಸು** | 36 ವರ್ಷ |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಬಿರಾಳ |

**<u>ದಿನಾಂಕ 29.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ:</u>**

ಚಾಸಾ-4 ನನ್ನ ಮಗಳು, ಚಾಸಾ-5 ನನ್ನ ತಂದೆ. ಆರೋಪಿಗಳು ನನಗೆ ಗೊತ್ತು. 16.02. ರಂದು 3-ವರ್ಷಗಳ ಹಿಂದೆ ಬಿರಾಳ ಗ್ರಾಮದ ನನ್ನ ಹೊಲ ಸರ್ವೆ ನಂ.47 ರಲ್ಲಿ 6-ಎಕರೆ 19-ಗುಂಟೆ ಇದ್ದು, ಆ ದಿನ ಮಧ್ಯಾಹ್ನ 12.30 ಗಂಟೆಗೆ ನಾನು, ಚಾಸಾ-4 ರವರು ಹೊಲಕ್ಕೆ ಹೋದಾಗ 2ನೆ ಆರೋಪಿ ನನ್ನ ಗಳೆ ಹೊಡೆಯುತ್ತಿದ್ದನು. ನಾನು ಮತ್ತು ಚಾಸಾ-4 ರವರು ಗಳೆ ಹೊಡೆಯಬೇಡ ಎಂದು 2ನೆ ಆರೋಪಿಗೆ ಕೇಳಿದಾಗ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 2ನೆ ಆರೋಪಿತನು ಚಾಸಾ-4 ರವರ ರಟ್ಟೆ ಹಿಡಿದು ಎಳೆದಾಡಿರುತ್ತಾನೆ. ಆರೋಪಿತರು ನನಗೆ ಕೊಡಲಿ ಬಡಿಗೆಯಿಂದ ಹೊಡೆದು ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಆನಂತರ ಅದೆ ದಿನ ನಾನು ಪೊಲೀಸ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರು ದಾಖಲಿಸಿರುತ್ತೇನೆ. ಸದರಿ ದಾಖಲೆಯನ್ನು ನಾನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಹೆಬ್ಬಟ್ಟಿನ ಸಹಿ ಇರುತ್ತದೆ. ಸಾಕ್ಷಿ ದೂರಿನಲ್ಲಿ ತನ್ನ ಹೆಬ್ಬಟ್ಟಿನ ಸಹಿ ಸಹಿಯನ್ನು ಗುರುತಿಸಿರುವುದರಿಂದ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು.

ದೂರು ನೀಡಿದ ವಿಚಾರವಾಗಿ ನಾನು ತೋರಿಸಿದ ಘಟನಾ ಸ್ಥಳದಲ್ಲಿ ಪೊಲೀಸರು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಸ.ಸ.ಅರವರು ಅನುಮತಿಯುನ್ನ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಆರೋಪಿತರು ನಮ್ಮ ಹೊಲದಲ್ಲಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ನಿಜ. ಆರೋಪಿತರು ನಮಗೆ ಬೈದು ಅಮವಾನಪಡಿಸಿರುತ್ತಾರೆ. ದಿನಾಂಕ 20.02.2020 ರಂದು ಪೊಲೀಸ

ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ಜಗಳವಾದ ದಿನ ಪೋಲಿಸ ಠಾಣೆಗೆ ಹೋಗಿದ್ದು ಆ ದಿನ ಪೋಲಿಸರು ದೂರು ದಾಖಲಿಸಿಲ್ಲ ಎಂದರು ನುಡಿಯುತ್ತಾರೆ. ದೂರಿನಲ್ಲಿನ ವಿಚಾರಗಳನ್ನು ತಿಳಿದುಕೊಂಡು ಹೆಬ್ಬಿಟ್ಟನ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u> ಆರೋಪಿತರ ಪರ ವಕೀಲರು ತಮ್ಮ ಹಿರಿಯ ವಕೀಲರು ಊರಿನಲ್ಲಿ ಇರದ ಕಾರಣ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಸದರಿ ಕಾರಣವು ಸಕಾರಣವಾಗಿರುವುದಿಲ್ಲ ಹಾಗೂ 2022 Live Law (SC) 137 Rajesh Yadav V/s. State of UP ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಖಾಸಗಿ ಸಾಕ್ಷಿದಾರರ ಮುಖ್ಯ ವಿಚಾರಣೆ ಹಾಗೂ ಪಾಟಿ ಸವಾಲನ್ನು ಒಂದೇ ದಿನ ತೆಗೆದುಕೊಳ್ಳುವಂತೆ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ವಕೀಲರ ಪ್ರಾರ್ಥನೆಯನ್ನು ತಿರಸ್ಕರಿಸಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ